# ಮನಸು ಕಲ್ಲೇ...

ನಿಜ ಕಣೋ ಹುಡುಗ
ನಾನು ಅದೇ ಹಳೆಯ ಪಾಳು
ದೇವಳದ
ಕಲ್ಲು ಮೆಟ್ಟಿಲೇ ನಿಜ...
ನೀನು ನನ್ನೆದೆಯ ಮೇಲೆ
ಕಾಲಿಟ್ಟೇ ಒಳಗೆ ಹೋಗಿದ್ದು
ಮರೆತೇಹೋಯಿತೇನು
ಬೇಕಿದ್ದರೆ ತಿರುಗಿ
ನೋಡೊಮ್ಮೆ...

ನನ್ನೆದೆಯ ಮೇಲೆ ಕಾಲಿಟ್ಟವರು
ಯಾರೂ ನನ್ನ ನೆನಪಿಟ್ಟಿಲ್ಲ,
ನಾನೂ ಯಾರ ಹೆಜ್ಜೆಗುರುತನ್ನೂ
ಉಳಿಸಿಕೊಂಡಿಲ್ಲ...
ಬೇಕಿದ್ದರೆ ಕೇಳಿ ನೋಡು
ಗರ್ಭಗುಡಿಯ ಕರೀ
ದೇವರೂ ಕೂಡ
ನನ್ನ ತುಳಿದೇ ಹೋಗಿದ್ದು,
ತನ್ನ ಹೆಜ್ಜೆಯ ತಾನೇ
ಅಳಿಸಿ ಹೋಗಿದ್ದು...

ದೇವರ ಕೆತ್ತಿಟ್ಟವರೇ
ನನ್ನನ್ನೂ ಕೆತ್ತಿದ್ದು
ನನ್ನ ದೇವರ
ಎದೆಬಯಲಿನೊಳಗೆ ಬರೀ
ಕಗ್ಗಲ್ಲುಗಳನಿಟ್ಟು...
ನನ್ನೊಳಗೆ ಮಾತ್ರ
ಹೂ ಮನಸನಿಟ್ಟು
ಮೋಸಮಾಡಿದರು...

ಕತ್ತಲ ಹಸೀ ರಾತ್ರಿಗಳಲ್ಲಿ
ಬೆತ್ತಲೆ ದೇವರು ಬಂದು
ನನ್ನಮೇಲೊರಗಿದ್ದು
ಮುಗಿಲಿಗಷ್ಟೇ ಗೊತ್ತು...

ಹೀಗೆ ಅದೆಷ್ಟೋ ಇರುಳುಗಳು
ಮೈಹೊಸೆದ ನನ್ನ ಮೇಲ್ಮೈ
ಸೂಳೆಯ ಮೈಗಿಂತಲೂ ಹೆಚ್ಚು
ಮಲಿನವಾಗಿದೆ.

ಯಾವ ಮಂತ್ರ ತಾನೇ
ದೇವರು ಮಾಡಿದ ಮಲಿನತೆಯನ್ನ
ಮತ್ತೆ ಮಡಿಮಾಡಬಲ್ಲದು...
ಎಲ್ಲ ಹೇಳಬೇಕಿತ್ತು ನಾನು
ಈಗ ನಿನ್ನೆದುರು
ಹೇಳಬೇಕೆನ್ನುವ ನನ್ನ
ಹಪಾಪಿಗಳಿಗೆ ಬಾಯಿಲ್ಲ.
ಕೇಳಬೇಕಾದ ನಿನಗೋ
ಜಾಣಕಿವುಡು...

● **ಕಂಠಿ ಚೆಂಡೂರ್**

